**ದಿನಾಂಕ: 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.ವಿ.ಸಿ.ಎಂ.ಪಿ. ವಕೀಲರಿಂದ**

ಈಗ ನಿಮಗೆ ಆದಂತಹ ಗಾಯಗಳು ವಾಸಿಯಾಗಿ ಮೊದಲಿನಂತೆ ಕೆಲಸ ಮಾಡುತ್ತಿದ್ದೀರಿ ಎಂದರೆ ಮೊದಲಿನ ತರಹ ಕೆಲಸ ಮಾಡಲು ಆಗಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಎಲ್ಲಾ ಗಾಯಗಳು ವಾಸಿಯಾಗಿದ್ದರೂ ಸಹ ವೈದ್ಯರಿಂದ ನಿಪಿ-51 ನ್ನು ಸೃಷ್ಠಿ ಮಾಡಿ ಹಾಕಿದ್ದೀರಿ ಎಂದರೆ ಸರಿಯಲ್ಲ. ನಿಪಿ-52 ಎಕ್ಸ್- ರೆ ವರದಿ ಪ್ರಕಾರ ನಿಮಗೆ ನಾರ್ಮಲ್ ಇದೆ ಎಂದು ವರದಿ ನೀಡಿದ್ದಾರೆ ಎಂದರೆ ನೋವು ಇದೆ ಎಂದು ಉತ್ತರಿಸುತ್ತಾರೆ. ನಿಪಿ-51 ರಿಂದ 54 ದಾಖಲೆಗಳನ್ನು ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಠಿ ಮಾಡಿ ಹಾಕಿದ್ದೀರಿ ಎಂದರೆ ಸರಿಯಲ್ಲ.

**1ನೇ ಎದುರುದಾರರ ಪರ ವಕೀಲರು ತಕರಾರನ್ನು ಸಲ್ಲಿಸದ ಕಾರಣ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ